ಓ .ಎಸ್ ನಂಃ 124/2019
ಪಿಡಬ್ಲ್ಯೂಃ 2
ದಿನಾಂಕಃ 04.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಎಂ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನನ್ನ ರುಜುವನ್ನು ಹಾಕಿದ್ದೇನೆ. ನಿಪಿ 2 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ನಿಪಿ 2 ಕ್ಕೆ ಒಬ್ಬ ಹೆಂಗಸು ಅವರ ಹೆಸರು ಕಾಂತ ಮತ್ತು ಒಬ್ಬ ಗಂಡಸು ಅವರ ಹೆಸರು ನೆನಪಿಲ್ಲ , ಅವರುಗಳು ಸಹಿ ಮಾಡಿರುತ್ತಾರೆ . ನನ್ನ ಸಹಿಯನ್ನು ನಿಪಿ 2 ರಲ್ಲಿ ಗುರುತಿಸಿದ್ದು ಅದನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 2 ನ್ನು ನೀಡಿ ಅದರಲ್ಲಿ ಖರೀದಿದಾರರ ಸಹಿಯನ್ನು ಕೇಳಲಾಗಿ ಬಹಳ ಒಟ್ಟು ಕರಾರನ್ನು ನೋಡಿ ನಂತರ ವಾದಿಯ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ದಾವಾ ಸ್ವತ್ತನ್ನು ಇಬ್ಬರು ಖರೀದಿದಾರರು ಖರೀದಿಸಿರುತ್ತಾರೆ . ನನ್ನೊಂದಿಗೆ ನಿಪಿ 2 ಕ್ಕೆ ಸಾಕ್ಷಿಯಾಗಿ ಇನ್ನೊಬ್ಬರು ಸಹಿ ಮಾಡಿರುತ್ತಾರೆ ಅವರ ಹೆಸರು ಗೊತ್ತಿಲ್ಲ .

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್